## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ

ವಿಷಯ: ರಾಜ್ಯದಲ್ಲಿ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳನ್ನು ಸಿವಿಲ್ ಹುದ್ದೆಗೆ ತಂದಾಗ ಸಿವಿಲ್ ವಿಭಾಗದ ಹಿರಿಯ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ. 1994ನೇ ಬ್ಯಾಚ್‌ನ ಸಿವಿಲ್ ಅಧಿಕಾರಿಗಳ ಮೇಲೆ 2002ರ ಬ್ಯಾಚ್‌ನ ಡಿಟೆಕ್ಟಿವ್ ಅಧಿಕಾರಿಗಳನ್ನು ಎಸ್.ಪಿ.ಯಾಗಿ ಮಾಡಿರುವುದರಿಂದ ಸಿವಿಲ್ ಅಧಿಕಾರಿಗಳ ಹಿರಿತನ ಕಡೆಗಣನೆ ಮಾಡಲಾಗಿದೆ. ಡಿಟೆಕ್ಟಿವ್ ಡಿಎಸ್‌ಪಿ/ಎಸ್‌ಪಿ ಅಡಿಯಲ್ಲಿ ಕೆಲಸ ಮಾಡಲು ಡಿಟೆಕ್ಟಿವ್ ಪಿ.ಎಸ್.ಐ/ಪಿ.ಐ ಇಲ್ಲದೆ ಇದ್ದಾಗಲೂ ಅವರುಗಳಿಗೆ 5 ವರ್ಷಗಳಿಗೊಮ್ಮೆ ಬಡ್ತಿ ನೀಡುತ್ತಿದ್ದು, 5 ವರ್ಷಗಳ ಅಂತರದಲ್ಲಿ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಬಡ್ತಿ ನೀಡಿದ ಮೇಲೆ ಸಿವಿಲ್ ಇನ್ಸ್‌ಪೆಕ್ಟರ್‌ಗಳಿಗೆ 5 ವರ್ಷಗಳ ಅಂತರದಲ್ಲಿ ಬಡ್ತಿ ನೀಡದೆ ಅನ್ಯಾಯ ಮಾಡಲಾಗುತ್ತಿದೆ. ನಾನ್ ಐಪಿಎಸ್ ಹುದ್ದೆಗಳಿಗೆ ಐ.ಪಿ.ಎಸ್ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ. ಇದರಿಂದ ಕನ್ನಡಿಗರ ನಾನ್ ಐ.ಪಿ.ಎಸ್. ಹುದ್ದೆಯನ್ನು ಐ.ಪಿ.ಎಸ್. ಹುದ್ದೆಗೆ ಬದಲಾಯಿಸಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರಿಗೆ ಅನ್ಯಾಯ ಮಾಡಲಾಗುತ್ತಿದೆ. ಐ.ಪಿ.ಎಸ್. ಹುದ್ದೆಗಳು ಖಾಲಿ ಇಲ್ಲದೆ ಇದ್ದಾಗಲೂ ಐ.ಪಿ.ಎಸ್. ಅಧಿಕಾರಿಗಳನ್ನು ರಾಜ್ಯದಲ್ಲಿ ನೇಮಕಾತಿ ಮಾಡಿಕೊಳ್ಳುವುದರಿಂದ ರಾಜ್ಯದಲ್ಲಿ ಬಡ್ತಿಗಾಗಿ ಕಾಯುತ್ತಿರುವ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಈಗಾಗಲೇ ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಖಾಲಿ ಇರುವ 25 ನಾನ್ ಐ.ಪಿ.ಎಸ್. ಎಸ್.ಪಿ. ಹುದ್ದೆಗಳಿಗೆ ಕೂಡಲೇ ಬಡ್ತಿ ನೀಡಬೇಕು. ರಾಜ್ಯದಲ್ಲಿ ಬಡ್ತಿಗಾಗಿ ಮೀಸಲಾದ ನಾನ್ ಐ.ಪಿ.ಎಸ್. ಹುದ್ದೆಗಳನ್ನು ಬಡ್ತಿಯವರಿಗೆ ಮೀಸಲಿಡಬೇಕೆಂಬ ವಿಷಯದ ಬಗ್ಗೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಗೃಹ ಸಚಿವರು ಈ ವಿಷಯದ ಬಗ್ಗೆ ಕೂಡಲೇ ಸಭೆ ಕರೆದು ಸಮಸ್ಯೆ ಬಗೆಹರಿಸುವುದಾಗಿ ಹೇಳಿಕೆ ನೀಡಿದ್ದರೂ ಇದುವರೆವಿಗೂ ಸಭೆಯನ್ನು ಕರೆಯದೆ ಸಮಸ್ಯೆಯನ್ನು ಬಗೆಹರಿಸದಿರುವ ವಿಷಯವನ್ನು ನಿಯಮ 72 ರಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

### ಸರ್ಕಾರದ ಹೇಳಿಕೆ

ಸಿವಿಲ್ ಮತ್ತು ಸಿಐಡಿ ಘಟಕದ ಡಿಟೆಕ್ಟಿವ್ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಯಲ್ಲಿರುತ್ತದೆ. ಸಿಐಡಿ ಘಟಕದ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮ 1994 ರನ್ವಯ ಜ್ಯೇಷ್ಠತೆ, ಅರ್ಹತೆ ಮತ್ತು ರಿಕ್ತಸ್ಥಾನಗಳನ್ನಾಧರಿಸಿ 2002 ರ ಬ್ಯಾಚಿನ ಡಿಟೆಕ್ಟಿವ್ ಡಿವೈಎಸ್‌ಪಿ ರವರುಗಳಿಗೆ ಎಸ್‌ಪಿ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ. ಡಿಟೆಕ್ಟಿವ್ ವೃಂದದಲ್ಲಿ ನೇರ ನೇಮಕಾತಿ ಅಡಿ 2002 ನೇ ಬ್ಯಾಚಿನ್ ಪಿಎಸ್‌ಐಗಳು ಮೊದಲನೇ ಬ್ಯಾಚ್ ಆಗಿ ನೇಮಕಾತಿ ಹೊಂದಿದ್ದು ಜ್ಯೇಷ್ಠತೆ, ಅರ್ಹತೆ ಮತ್ತು ರಿಕ್ತಸ್ಥಾನಗಳನ್ನಾಧರಿಸಿ ಮುಂಬಡ್ತಿ ಹೊಂದಿರುತ್ತಾರೆ. ಇದರಿಂದಾಗಿ ಯಾವುದೇ ಅಧಿಕಾರಿಗಳ ಹಿರಿತನವನ್ನು ಕಡೆಗಣಿಸಿರುವುದಿಲ್ಲ. ಸಿವಿಲ್ ವೃಂದದಲ್ಲಿ ಕೆಳಹಂತದಲ್ಲಿ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಡಿವೈಎಸ್‌ಪಿ/ಎಸ್‌ಪಿ ರಿಕ್ತಸ್ಥಾನಗಳು ಕಡಿಮೆ ಇರುತ್ತದೆ. ಆದುದರಿಂದ, ಸಿವಿಲ್ ವೃಂದದ ಅಧಿಕಾರಿಗಳಿಗೆ ಮುಂಬಡ್ತಿ ಅವಕಾಶಗಳು ಡಿಟೆಕ್ಟೀವ್ ಅಧಿಕಾರಿಗಳಿಗಿಂತ ಕಡಿಮೆ ಇರುತ್ತದೆ. ರಿಕ್ತಸ್ಥಾನಗಳಿಗನುಗುಣವಾಗಿ ಸಿವಿಲ್ ವೃಂದದ ಅಧಿಕಾರಿಗಳಿಗೆ ಜೇಷ್ಠತೆ ಮತ್ತು ಅರ್ಹತೆಯನ್ನು ಪರಿಗಣಿಸಿ ಕಾಲಕಾಲಕ್ಕೆ ಮುಂಬಡ್ತಿ ನೀಡಲಾಗಿದೆ.

ನಾನ್ ಐಪಿಎಸ್ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ಹಾಗೂ ಐಪಿಎಸ್ ಹುದ್ದೆಗಳಿಗೆ ನಾನ್-ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ನೇಮಕ ಮಾಡಲಾಗುತ್ತಿದೆ. ರಾಜ್ಯದಲ್ಲಿ ಎಸ್‌ಪಿ

ವೃಂದದಲ್ಲಿ 57 ಕೇಡರ್ ಹುದ್ದೆಗಳ ಮಂಜೂರಾತಿ ಬಲವಿರುತ್ತದೆ ಆದರೆ ಪ್ರಸ್ತುತ, 111 ಎಸ್‌ಪಿ ಐಪಿಎಸ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇದರಿಂದಾಗಿ ಅನಿವಾರ್ಯವಾಗಿ ಐಪಿಎಸ್ ಅಧಿಕಾರಿಗಳನ್ನು ಎಕ್ಸ್–ಕೇಡರ್ ಹುದ್ದೆಗಳಿಗೆ ನಿಯೋಜಿಸಬೇಕಾಗಿರುತ್ತದೆ. ಪ್ರಸ್ತುತ ಎಸ್‌ಪಿ (ನಾನ್–ಐಪಿಎಸ್) ವೃಂದದಲ್ಲಿ 08 ಹುದ್ದೆಗಳು ಮಾತ್ರ ಖಾಲಿಯಿರುತ್ತದೆ. 03 ಅಧಿಕಾರಿಗಳು ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ.

ನೇರ ನೇಮಕಾತಿ ಅಡಿಯಲ್ಲಿ ಮಂಜೂರಾದ ಐಪಿಎಸ್ ಹುದ್ದೆಗಳನ್ನು ಕೇಂದ್ರ ಗೃಹ ಮಂತ್ರಾಲಯದಿಂದ ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಮಾಡಲಾದ ಹುದ್ದೆಗಳ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ. ನಾನ್–ಐಪಿಎಸ್ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ಹಾಗೂ ಐಪಿಎಸ್ ಹುದ್ದೆಗಳಿಗೆ ನಾನ್ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ನೇಮಕ ಮಾಡಲಾಗುತ್ತಿರುತ್ತದೆ. ಡಿವೈಎಸ್‌ಪಿ ಹುದ್ದೆಯಿಂದ ಎಸ್‌ಪಿ (ನಾನ್–ಐಪಿಎಸ್) ಹುದ್ದೆಗೆ ಮುಂಬಡ್ತಿಯನ್ನು ಜ್ಯೇಷ್ಠತೆ ಮತ್ತು ಅರ್ಹತೆ ಹಾಗೂ ರಿಕ್ತಸ್ಥಾನಗಳನ್ನಾಧರಿಸಿ ಆಗ್ಗಿಂದಾಗ್ಗೆ ಮುಂಬಡ್ತಿ ನೀಡಲಾಗುತ್ತಿರುತ್ತದೆ.

ಈ ಹಿಂದೆ ಜಾರಿಯಲ್ಲಿದ್ದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ 1994 ರಲ್ಲಿ ಎಸ್‌ಪಿ (ಡಿಟೆಕ್ಟಿವ್) ವೃಂದಕ್ಕೆ ಮಂಜೂರಾದ 08 ಹುದ್ದೆಗಳನ್ನು ಮೀರಿ ಇನ್ನಾವುದೇ ಡಿಟೆಕ್ಟಿವ್ ಎಸ್‌ಪಿ ಹುದ್ದೆಗಳನ್ನು ಹೆಚ್ಚಿಸಿರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಹುದ್ದೆಗಳು ಕೇವಲ ಮರುಹಂಚಿಕೆಯಾಗಿರುತ್ತದೆ. ಹೀಗಾಗಿ ನಾನ್ ಐಪಿಎಸ್ ವೃಂದಕ್ಕೆ ಲಭ್ಯವಿರುವ ಹುದ್ದೆಗಳಲ್ಲಿ ಒಟ್ಟಾರೆಯಾಗಿ ಯಾವುದೇ ಹುದ್ದೆಗಳನ್ನು ಕಡಿತಗೊಳಿಸಿರುವುದಿಲ್ಲ.

ಸಂಖ್ಯೆ: ಒಇ 65 ಪಿಇಜಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು